**O.S.32-21 DW-3**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ A V B, ವಕೀಲರಿಂದಃ**

2. ನಾನು ಈ ಕೇಸಿನಲ್ಲಿ 11 ನೇ ಪ್ರತಿವಾದಿ. ನನ್ನ ಹೆಸರು ಮಹಮ್ಮದಸಾಬ ಹಜರೇಸಾಬ ಬುಳ್ಳನ್ನವರ. ನಾನು 11 ನೇ ಪ್ರತಿವಾದಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ದಾವೆಯ ರಜಿಯಾಬೇಗಂ ನನಗೆ ಸಂಬಂಧಿಕರು. ವಾದ ಪತ್ರ ಹಾಗೂ ಪ್ರತಿವಾದ ಪತ್ರಗಳು ನನಗೆ ಗೊತ್ತಿಲ್ಲ. ನಾನು ಪ್ರತಿವಾದ ಪತ್ರಕ್ಕೆ ಸಹಿ ಮಾಡಿದ್ದೇನೆ. ನಾನು ಪ್ರತಿವಾದ ಪತ್ರ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ಒಬ್ಬನೇ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ. ಯಾರಾದರೂ ಅಧಿಕಾರ ಪತ್ರ ನೀಡಿದ್ದಾರೆಯೇ ಅಂದರೆ ಸುಮ್ಮನಿರುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿದಿಯಾ ಅಂದರೆ ಮೌನವಾಗಿ ನಿಂತಿರುತ್ತಾರೆ. ರಾಮನಗೌಡನಿಗೆ ಅವರ ಅಜ್ಜನಿಂದ ಆಸ್ತಿಗಳು ಬಂದಿವೆ ಅಂದರೆ ಸರಿ. ದಾವಾ ಆಸ್ತಿಗಳು ರಾಮನಗೌಡನ ಅಜ್ಜನ ಆಸ್ತಿಗಳಾಗಿರುವುದರಿಂದ ಅವುಗಳನ್ನು ಮಾರಾಟ ಮಾಡುವ ಅಧಿಕಾರ ಇಲ್ಲವೆಂದರೆ ಸಾಕ್ಷಿಯೂ ಮೌನವಾಗಿ ನಿಂತಿರುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಗೆ ಅಧಿಕಾರ ಇದೆ ಅಂದರೆ ಸಾಕ್ಷಿಯೂ ಮೌನವಾಗಿ ನಿಂತಿರುತ್ತಾರೆ. ನಾನು ಹಾಗೂ ರಾಮನಗೌಡ ಮಿಲಾಪಿಯಾಗಿ ವಾದಿಗೆ ಆಸ್ತಿಗೆ ಕೊಡಬಾರದೆಂದು ಖರೀದಿ ಪತ್ರ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

3. ನಾನು ಪ್ರತಿವಾದ ಪತ್ರ ಸಲ್ಲಿಸಿಲ್ಲ ಅಂದರೆ ಸುಮ್ಮನೆ ನಿಂತಿರುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಅಂದರೆ ಮೌನವಾಗಿ ನಿಂತಿರುತ್ತಾರೆ. ವಾದಿಗೆ ಮೋಸ ಮಾಡಲು ಖರೀದಿ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.